
ಪಾತ್ರಧಾರಿ ಮತ್ತು ನಿರೂಪಕರಿಗೂ ಒಂದು ದೂರವನ್ನು ಏರ್ಪಡಿಸಿ, ಹೊರಗಿನಿಂದ ತುಲನಾತ್ಮಕವಾಗಿ ಟಿಪ್ಪಣಿಯನ್ನು ಮಾಡುತ್ತದೆ. ಖಾಸಗಿ ಅನ್ನುವುದು ಯಾವುದೂ ಇಲ್ಲ. ಖಾಸಗಿಯೂ ಒಂದು ರಾಜಕೀಯ ಪ್ರಕ್ರಿಯೆಯ ಪಾತ್ರವೇ ಎನ್ನುವ ಸ್ತ್ರೀವಾದಿ ನಿಲುವನ್ನು ಈ ಪುಸ್ತಕ ಪ್ರತಿಪಾದಿಸುತ್ತದೆ.

ಯಾರೂ ಯಾರಿಗೂ ಏನನ್ನೂ ಕೊಡುವುದಿಲ್ಲ. ಸಹಭಾಗಿತ್ವದಲ್ಲಿ ಎಲ್ಲರೂ ಏನನ್ನಾದರೂ ಪಡೆದುಕೊಳ್ಳುತ್ತೇವೆ. ಇದು ಅರುಣಾರ ಜೀವನದ ಬೀಜಮಂತ್ರ. ಈ ಪುಸ್ತಕ ಅರುಣಾರ ಬಾಲ್ಯ, ವೈಯಕ್ತಿಕ ಜೀವನದ ಬಗ್ಗೆ ಏನೂ ಹೇಳುವುದಿಲ್ಲ. ಅದು ಗೌಣ. ಇದು ಕೇವಲ ಆಕೆಯ ಸಾರ್ವಜನಿಕ ಜೀವನದ ಗಾಥೆ. ಈ ಗಾಥೆಯಲ್ಲಿ ಒಂದು ಆಂದೋಲನದಲ್ಲಿ, ಮುಖ್ಯವಾಗಿ ಸಾರ್ವಜನಿಕವಾಗಿ ಕಾಣುವ ವ್ಯಕ್ತಿಗೆ ಕೊಡುವ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿ ತಮ್ಮದೇ ರೀತಿಯಲ್ಲಿ ಸಾರ್ಥಕ್ಯವನ್ನು ತುಂಬುವ ಅನೇಕ ಜನರ ಶಕ್ತಿಯನ್ನು ಗುರುತಿಸುವ ಪ್ರಕ್ರಿಯೆಯಿದೆ.

ನೀವು ಜನರಿಗೆ ಸಹಾಯ ಮಾಡಲು ಹೊರಡಬಹುದು. ಆದರೆ ಅದರಿಂದ ಅವರಿಗೆ ಉಪಯೋಗವಿದೆಯೇ ಅನ್ನುವುದನ್ನು ಅರಿಯಬೇಕು. ನನಗೆ ಗೊತ್ತು, ನಾನು ಕೊಡುತ್ತೇನೆನ್ನುವ ಅಹಮ್ಮನ್ನು ಗೆಲ್ಲುವುದು ಸಾಧ್ಯವೇ?

ಎಪ್ಪತ್ತರ ದಶಕದಲ್ಲಿ ('ಅಸ್ತ್ರ ಒಲೆ' ಎಂದು ದಕ್ಷಿಣ ಭಾರತದಲ್ಲಿ ಖ್ಯಾತಿ ಪಡೆದಿದ್ದ) ಹೊಗೆರಹಿತ ಒಲೆಯನ್ನು ಜನರು ಉಪಯೋಗಿಸಬೇಕೆಂದು ಸಮಾಜಸೇವಾ ಸಂಸ್ಥೆಗಳು ಪ್ರತಿಪಾದಿಸುತ್ತಿದ್ದುವು. ದಕ್ಷಿಣ ಭಾರತದಲ್ಲಿ ರೂಪಿಸಿದ ಈ ಹೊಗೆರಹಿತ ಒಲೆ ರಾಜಸ್ಥಾನದಲ್ಲಿ ಯಶಸ್ವಿಯಾಗಲಿಲ್ಲ. ಕಾರಣ – ಅಲ್ಲಿ ಮಾಡುವ ಸಜ್ಜೆ ಮತ್ತು ಜೋಳದ ರೊಟ್ಟಿಗಳಿಗೆ ಈ ಒಲೆಯಲ್ಲಿನ ಶಾಖ ಮತ್ತು ತವಾದ ಸುತ್ತಳತೆ ಒಗ್ಗುತ್ತಿರಲಿಲ್ಲ. ಸೋಲಾರ್ ಕುಕ್ಕರ್ ಅನ್ನ ಮತ್ತು ಬೇಳೆ ಬೇಯಿಸುವುದಕ್ಕೆ ಸರಿಯಿತ್ತು. ರೊಟ್ಟಿ ತಿನ್ನುವ ಪ್ರಾಂತದಲ್ಲಿ ಅದನ್ನಿಟ್ಟುಕೊಂಡು ಮಾಡುವುದಾದರೂ ಏನು? ಹೀಗೆ ಜನರಿಗೆ ಸಹಾಯ ಮಾಡಬೇಕೆಂದರೂ, ಅಲ್ಲಿನ ಸ್ಥಳೀಯ ಪದ್ಧತಿ ಸಂಸ್ಕೃತಿಗಳನ್ನು ಅರಿಯದೇ ಏನೂ ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ಅರುಣಾ ಬೇಗನೇ ಕಂಡುಕೊಳ್ಳುತ್ತಾರೆ. ಈ ವಿನಮ್ರತೆಯೇ




ಆಕೆಯ ಜೀವನದ ಮುಖ್ಯ ಲಕ್ಷಣವಾಗುತ್ತದೆ. ಹೀಗಾಗಿಯೇ ದೇವಡುಂಗ್ರಿಯಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ಅಲ್ಲಿನ ಜನರೊಂದಿಗೆ ಸಹಜೀವನ ನಡೆಸುವುದು ಮುಖ್ಯ ಅನ್ನಿಸುತ್ತದೆ.

ಅದೇ ರೀತಿಯಲ್ಲಿ ಯಾವುದೋ ಆಕಸ್ಮಿಕ ದುರಂತದಲ್ಲಿ ದೇಹದ ಕೆಳಭಾಗದ ಅಂಗಾಂಗಗಳನ್ನು ಕಳೆದುಕೊಂಡವರಿಗೆ 'ಜೈಪುರ್ ಫುಟ್' ಎಂದೇ ಖ್ಯಾತಿ ಪಡೆದಿರುವ ಕೃತಕ ಕಾಲನ್ನು ತಯಾರಿಸಿದವರು ಅದರ ತೂಕ, ಅದನ್ನು ದೇಹಕ್ಕೆ ಕಟ್ಟುವ ರೀತಿ, ಅದರಿಂದ ಚಲನೆಯ ಸರಳತೆಯ ಬಗ್ಗೆ ಯೋಚಿಸಿದ್ದಲ್ಲದೇ, ಸಾಮಾಜಿಕ ಪದ್ಧತಿಗಳನ್ನೂ ಯೋಚಿಸಬೇಕಾಯಿತು. ಕೃತಕ ಕಾಲಿಗೆ ಬೂಟುಗಳನ್ನು ಅಡಕಗೊಳಿಸುವುದು ಪಾಶ್ಚಾತ್ಯರಿಂದ ಬಂದ ಬಳುವಳಿ. ಆದರೆ ನಮ್ಮಲ್ಲಿ ದೇವಾಲಯಕ್ಕೆ, ಮನೆಯೊಳಕ್ಕೆ ಪ್ರವೇಶಿಸುವಾಗ ಪಾದರಕ್ಷೆಗಳನ್ನು ಬಿಚ್ಚುವ ಪ್ರಕ್ರಿಯೆಯಿದೆ. ಈ ವಿವರವನ್ನು, ಜನ ಕುರ್ಚಿಗಳಲ್ಲಿ ಕೂರುವುದಕ್ಕಿಂತ